ಈ ಒಂದು ಹಿನ್ನೆಲೆಯಲ್ಲಿ ಕೂಡಲ ಸಂಗಮನಾಥನ ಬಗ್ಗೆ ಸರ್ಕಾರ ಹೇಗೆ ಕಾಳಜಿ ವಹಿಸಿದೆಯೋ ಅದೇ ರೀತಿ ಮುಳುಗಡೆಯಾಗುವಂತಹ ಅನೇಕ ಹಳ್ಳಿಗಳಲ್ಲಿರುವ ಮಹತ್ವವಾದಂತಹ ಧಾರ್ಮಿಕ ಕೇಂದ್ರಗಳ ಬಗ್ಗೆ ಸರ್ಕಾರ ನಿಷ್ಕಾಳಜಿ ವಹಿಸುವುದನ್ನು ತಪ್ಪಿಸಿ ಅದರ ಬಗ್ಗೆ ಕಾಳಜಿ ಮಾಡಬೇಕು. ಅವುಗಳ ಸುಂದರ ಕಲಾಕೃತಿಯ ಕುಸುರಿಯ ಒಳ್ಳೆಯ ಕೆತ್ತನೆಯ ಶಿಲೆಗಳು ಒಳ್ಳೆಯ ಕಟ್ಟಿಗೆಗಳು, ಲಕ್ಷಾಂತರ ರೂಪಾಯಿಗಳು ಬೆಲೆಬಾಳುವ ಮಠ ಮಂದಿರಗಳ ಸೊತ್ತು ಇವತ್ತು ನಿರಾಯಾಸವಾಗಿ ಮುಳುಗಿ ಹೋಗುತ್ತಿರುವ ನೋವನ್ನು ನಾವು ಅನುಭವಿಸುತ್ತಿದ್ದೇವೆ. ಮುಳುಗಡೆಯಾಗುವ ಹಳ್ಳಿಗಳ ವ್ಯಾಪ್ತಿಯಲ್ಲೇ ಬರುವಂತಹ ಚಿಕ್ಕ ಸಂಗಮನ ಒಂದು ಸಂಗಮನಾಥ ದೇವಸ್ಥಾನ, ಹೆಣ್ಣೂರಿನ ಲಕ್ಷ್ಮಿದೇವಿ ಗುಡಿ, ಹೇರಿಕಲ್ಲದ ಬಸವೇಶ್ವರ ದೇವಸ್ಥಾನ, ಕಮದಾದ ಆಂಜನೇಯ, ಈಲಾದ ಬೊಮ್ಮಲಿಂಗೇಶ್ವರ ಇಂತಹ ಮಹತ್ವ ಪಡೆದಂತಹ ದೇವಸ್ಥಾನಗಳೂ ಕೂಡ ಇವತ್ತು ಗಂಗೆಯ ಪಾಲಾಗುತ್ತಿವೆ. ಅವುಗಳ ಬಗ್ಗೆ ಕೂಡ ಸರ್ಕಾರ ಕಾಳಜಿ ವಹಿಸಿ ತಕ್ಷಣ ಇವುಗಳು ಮುಳುಗಡೆಯಾಗು ವಂತಹ ಹಿನ್ನೀರು ಬರುವಂತಹ ಈ ಸಂದರ್ಭದಲ್ಲಿ ಅಷ್ಟರೊಳಗಾಗಿ ಆ ದೇವಸ್ಥಾನಗಳ ಆ ಸೊತ್ತನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿ ಹಾನಿಗೊಳಗಾಗುವುದನ್ನು ತಪ್ಪಿಸಿ, ಸಾರ್ವಜನಿಕ ವಂತಿಗೆಯಿಂದ ಇವತ್ತೇನು ಆ ಮಂದಿರಗಳನ್ನು ಕಟ್ಟಿಸಿದ್ದಾರೋ, ಆ ಜನರ ಧಾರ್ಮಿಕ ಭಾವನೆಗಳಿಗೆ ಸರ್ಕಾರ ಮಹತ್ವ ಕೊಡಬೇಕು. ಪುನರ್ ವಸತಿ ಕೇಂದ್ರದಲ್ಲಿ ಅವುಗಳಿಗೆ ಜಾಗ ಕಲ್ಪಿಸಿ ಮತ್ತೊಮ್ಮೆ ಜನ ಆ ಸುಂದರ ದೇವಸ್ಥಾನಗಳನ್ನು, ಮಠ, ಮಂದಿರಗಳನ್ನು ಕಟ್ಟಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ಹೇಳುತ್ತಾ, ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂತಹ ವಸ್ತುಗಳನ್ನೂ ಕೂಡ ಸರ್ಕಾರ ಸಾಗಿಸಿ ಸಹಕರಿಸಬೇಕೆಂಬ ಒಂದು ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾನು ಮಾಡುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರತಕ್ಕಂಥ ದೇವಸ್ಥಾನಗಳು, ಮಂದಿರಗಳು ಏನಿವೆ ಅವುಗಳ ದುರಸ್ತಿ, ಜೀರ್ಣೋದ್ಧಾರ ಕಾರ್ಯಗಳನ್ನು ಆಯಾ ದೇವಸ್ಥಾನ ಅಥವಾ ಮಂದಿರಗಳ ಕಮಿಟಿಯವರು ಮತ್ತು ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ಅವರೇ ಮಾಡಿಕೊಳ್ಳಬೇಕೆಂಬ ನಿರ್ದೇಶನವನ್ನು ಸರ್ಕಾರದಿಂದ ಈಗಾಗಲೇ ನಾವು ಕಳುಹಿಸಿದ್ದೇವೆ. ಸರ್ಕಾರದಿಂದ ನೇರವಾಗಿ ನಾವೇ ಮಾಡುವಂತಾದ್ದು ಇಲ್ಲ. ಮತ್ತೊಮ್ಮೆ ಈಗ, ಮುಳುಗಡೆ ಆಗತಕ್ಕಂಥ ಅಥವಾ ಮುಳುಗಡೆಯಾಗುವ ದೇವಸ್ಥಾನಗಳಿಗೆ ಏನೇನು ಮಾಡಬೇಕೋ ಅದನ್ನು ಆ ಕಮಿಟಿಯವರು ಮಾಡಬೇಕು ಎಂದು ನಾವು ಸೂಚನೆಯನ್ನು ಕೊಡುತ್ತೇವೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ : ಸರ್ಕಾರದವರೇ ಮುಂದೆ ಬಂದು ಆ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಅದನ್ನು ಪರಿಶೀಲನೆ ಮಾಡುತ್ತೇನೆ.

(ಅ) ಬಾಣಸವಾಡಿ ರೈಲ್ವೆ ಸ್ಟೇಷನ್‌ನಿಂದ ಸಿಟಿ ರೈಲ್ವೆ ಸ್ಟೇಷನ್‌ವರೆಗೆ ಹೊಸದಾಗಿ ಲೈನ್ ಹಾಕುವುದು.

ಶ್ರೀ ವಿ. ಶಿವರಾಜ್ (ಯಲಹಂಕ) : ಮಾನ್ಯ ಅಧ್ಯಕ್ಷರೆ, ಬಾಣಸವಾಡಿ ರೈಲ್ವೆ ಸ್ಟೇಷನ್‌ನಿಂದ ಸಿಟಿ ರೈಲ್ವೆ ಸ್ಟೇಷನ್‌ವರೆಗೂ ಕೂಡ ಈಗ ಹೊಸದಾಗಿ ರೈಲ್ವೆ ಲೈನ್ ಹಾಕಿ ಕನೆಕ್ಷನ್ ಮಾಡುವುದಕ್ಕೆ

ಹೊರಟಿದ್ದಾರೆ. ಸುಮಾರು ಆರು ಹಳ್ಳಿಗಳು ಇದರ ವ್ಯಾಪ್ತಿಗೆ ಬರುತ್ತವೆ. ಸೇವಾನಗರ, ಲಿಂಗರಾಜಪುರ ಕೆ.ಜಿ ಹಳ್ಳಿ ಕನಕನಗರ ಮತ್ತು ಅಶೋಕನಗರ, ಬಳ್ಳಾರಿ ರಸ್ತೆ ಇವು ಬರುತ್ತವೆ. ಯಲಹಂಕದ ಬಳಿ ಈಗಾಗಲೇ ಹೊಸದಾಗಿ ಒಂದು ಬ್ರಿಡ್ಜ್ ಅನ್ನು ನಿರ್ಮಾಣ ಮಾಡುವ ಕೆಲಸ ಮುಗಿದಿದೆ. ಈಗ ಹೊಸದಾಗಿ ರೈಲ್ವೆನವರು ಮಾಡಿದರೆ ಸುತ್ತಮುತ್ತ ವಾಸ ಮಾಡುತ್ತಿರುವಂತಹ ಮೂರುವರೆ ಲಕ್ಷ ಜನಕ್ಕೆ ಬಹಳ ಅಡಚಣೆಯಾಗುತ್ತದೆ. ರೈಲ್ವೆ ಲೈನ್‌ಗಳನ್ನು ಹಾಕುವುದಕ್ಕೆ ಮುಂಚೆಯೇ ಏಕೆ ಬ್ರಿಡ್ಜ್‌ಗಳನ್ನು ಮಾಡಬಾರದು ಎಂಬುದು ನನ್ನ ಪ್ರಶ್ನೆ. ನಾನು ಮತ್ತು ಮಾನ್ಯ ರಾಜಣ್ಣನವರು ಇತರರು ಸೇರಿ ಈ ರೈಲ್ವೆ ಪಟ್ಟಾ ಮಾಡುವುದಕ್ಕೆ ಮೊದಲು ಬ್ರಿಡ್ಜ್‌ಗಳನ್ನು ಮಾಡಿ ನಂತರ ಆ ರೋಡ್‌ಗಳನ್ನು ಮಾಡಬೇಕೆಂದು ಹೇಳಿ ಸೂಚನೆ ಕೊಟ್ಟೆವು. ಶರ್ಮ ಎಂಬ ರೈಲ್ವೆನವರು ಕೂಡ ಅಲ್ಲಿಗೆ ಬಂದು ಸರ್ವೆ ಎಲ್ಲಾ ಮಾಡಿದರು. ಬ್ರಿಡ್ಜ್ ಮಾಡಿದ ನಂತರವೇ ರೋಡ್‌ಗಳನ್ನು ನಾವು ಮಾಡುತ್ತೇವೆಂದು ಹೇಳಿದರು. ಆದರೆ ಈಗ ಸದ್ಯಕ್ಕೆ ರೈಲ್ವೆ ಲೈನ್‌ಗಳನ್ನು ತಂದು ಹಾಕಿ ಬಿಟ್ಟಿದ್ದಾರೆ. ಇದರಿಂದಾಗಿ ಸುಮಾರು ಮೂರೂವರೆ ಲಕ್ಷ ಜನಕ್ಕೆ ಅನಾನುಕೂಲವಾಗುತ್ತಿದೆ. ಟ್ರಾಫಿಕ್ ಜಾಮ್‌ನಿಂದಾಗಿ ಅಲ್ಲಿ ಸುಮಾರು 2 ಕೀ. ಮೀ. ವರೆಗೆ ಗಾಡಿಗಳು ನಿಲ್ಲುತ್ತವೆ. ಆದ್ದರಿಂದ ಬಾಣಸವಾಡಿಯಲ್ಲಿ ಮೊದಲು ರೈಲ್ವೆ ಸ್ಟೇಷನ್ ಎಲ್ಲಿತ್ತೋ ಅಲ್ಲೇ ಅದನ್ನು ಸೀಮಿತವಾಗಿ ಮಾಡಿದರೆ ಸುಮಾರು ಹಳ್ಳಿಗಳಿಗೆ ಉಪಯೋಗವಾಗುತ್ತದೆ. ಬಳ್ಳಾರಿ ರಸ್ತೆಯಲ್ಲಿ ದೇವನಹಳ್ಳಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರಕ್ಕೆ ಹೋಗುವ ಎಲ್ಲಾ ಗಾಡಿಗಳೂ ಕೂಡ ಅಲ್ಲೇ ಹೋಗುತ್ತವೆ. ಯಲಹಂಕದಲ್ಲಿ ಮಾನ್ಯ ದೇವೇಗೌಡರು ಅಧಿಕಾರದಲ್ಲಿದ್ದಾಗ ಅಲ್ಲೊಂದು ಹೊಸ ಬ್ರಿಡ್ಜ್‌ನ್ನು ಮಾಡಿದರು. ಇಲ್ಲಿ ಅಡಚಣೆ ಆದರೆ ಸೇಮ್ ಅದೇ ರಿಪೀಟ್ ಆಗುತ್ತದೆ. ಆದುದರಿಂದ ರೈಲ್ವೆ ಬೋರ್ಡ್‌ನವರಿಗೆ ಮಾನ್ಯ ಮಂತ್ರಿಗಳ ಮುಖಾಂತರ ಸೂಚನೆ ನೀಡಿ ಬ್ರಿಡ್ಜ್‌ಮಾಡಿದ ನಂತರವೇ ರೈಲ್ವೆ ಲೈನ್‌ಗಳನ್ನು ಹಾಕಬೇಕೆಂದು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎನ್ ರಾಜಣ್ಣ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸಿಟಿ - ಸೇಲಂ ರೂಟ್ ನಲ್ಲಿ ಮೀಟರ್ ಗೇಜ್ ಇದ್ದುದನ್ನು ಈಗ ಬ್ರಾಡ್‌ಗೇಜ್ ಮಾಡುತ್ತಿದ್ದಾರೆ ಬೆಂಗಳೂರು ಸಿಟಿಯಲ್ಲಿ 12 ಲಕ್ಷ ವೆಹಿಕಲ್ಸ್ ಇವೆ. ಪ್ರತಿದಿನ ಅದಕ್ಕೆ 500 ವೆಹಿಕಲ್ಸ್ ಸೇರುತ್ತಿವೆ. ಅವರು ಲೈನ್ ಹಾಕಬೇಕಾದರೆ ಬ್ರಿಡ್ಜ್ ಕಟ್ಟಿ ಹಾಕಬೇಕೆಂದು ಹೇಳಿ 1997ರಲ್ಲಿ ಮಾನ್ಯ ಸಿ.ನಾರಾಯಣಸ್ವಾಮಿಯವರು ಎಂ. ಪಿ. ಯಾಗಿದ್ದಾಗ, ಅವರು ನಾನು ಮಾನ್ಯಕೃಷ್ಣಪ್ಪನವರು ಎಲ್ಲಾ ಎಂಎಲ್‌ಎಗಳು ಸೇರಿಕೊಂಡು ಜಾಗ ಪರಿಶೀಲನೆ ಮಾಡಿದೆವು. ಆದರೆ ಅವರು ಇದುವರೆಗೂ ಕೂಡ ಆ ಕೆಲಸವನ್ನು ಜಾರಿಗೆ ತಂದಿಲ್ಲ. ರೈಲ್ವೆ ಬ್ರಿಡ್ಜ್ ಅಲ್ಲಿ ಆಗಬೇಕಾದರೆ ರಾಜ್ಯ ಸರ್ಕಾರ, ಬೆಂಗಳೂರು ಮಹಾನಗರ ಪಾಲಿಕೆಯವರು ಶ್ರದ್ಧೆ ವಹಿಸಬೇಕು. ಬೆಂಗಳೂರು ನಗರ ಮಹಾನಗರಪಾಲಿಕೆಯವರು ಬೆಂಗಳೂರು (ಉತ್ತರ)ದ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಕೆಲಸ ಯಾವುದೂ ನಡೆಯುತ್ತಿಲ್ಲ. ಆದ್ದರಿಂದ ದಯವಿಟ್ಟು ಈಗ ಅವರು ಬ್ರಿಡ್ಜ್ ಆಗುತ್ತಿದ್ದಂತೆಯೇ ಲೆವೆಲ್ ಕ್ರಾಸ್ ಮಾಡಿ ಪ್ರತಿ 5-10 ನಿಮಿಷಕ್ಕೊಮ್ಮೆ ಗೇಟ್ ಹಾಕುತ್ತಿದ್ದರೆ ಸುಮಾರು 2-3 ಕಿ. ಮೀ.ಗಳವರೆಗೆ ವೆಹಿಕಲ್ ನಿಂತುಕೊಳ್ಳುತ್ತವೆ. ಹೀಗಾದರೆ ಜನಸಾಮಾನ್ಯರ ಗತಿಯೇನು? ಎಂಬುದು ತಮಗೆ ಚೆನ್ನಾಗಿ ಗೊತ್ತು. ಉದಾಹರಣೆಗೆ ಹೇಳಬೇಕಾದರೆ, ಇವತ್ತು ಟಿನ್

ಫ್ಯಾಕ್ಟರಿ ಹತ್ತಿರ ಒಂದು ಬ್ರಿಡ್ಜ್ ಆಯಿತು. ಆ ಬ್ರಿಡ್ಜ್ ಏನಾದರೂ ಓಲ್ಡ್ ಮದ್ರಾಸ್ ರೋಡ್‌ನಲ್ಲಿ ಆಗದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಕಿಸಾನ್ ಫ್ಯಾಕ್ಟರಿಯಿಂದ ಮುಂದುಗಡೆ ಏನಾದರೂ ಬ್ರಿಡ್ಜ್ ಆಗಲಿಲ್ಲವೆಂದರೆ 2-3 ಕಿ. ಮೀ. ಗಳವರೆಗೆ ವೆಹಿಕಲ್ಸ್ ನಿಂತುಕೊಂಡು ಬಿಡುತ್ತಿತ್ತು. ಸೇಲಂ ರೂಟ್‌ನಲ್ಲೂ ಅದೇ ರೀತಿ ಆಗುತ್ತದೆ. ಅಲ್ಲಿ 3-4 ಬ್ರಿಡ್ಜ್ ಬರಬೇಕು. ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಈ ಕೆಲಸ ಶುರು ಮಾಡಲೇಬೇಕು. ಇದರ ಬಗ್ಗೆ ರೈಲ್ವೆ ಮಂತ್ರಿಗಳ ಗಮನ ಸೆಳೆಯಬೇಕು.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಸಂಕ್ಷಿಪ್ತವಾಗಿ ಹೇಳಬೇಕು. ಅಷ್ಟೊಂದು ಉದ್ದದ ಭಾಷಣ ಮಾಡಬೇಡಿ.

ಶ್ರೀ ಎನ್. ರಾಜಣ್ಣ : ಎರಡನೆಯದಾಗಿ, ಬೆಂಗಳೂರು ಸಿಟಿಯಿಂದ ಮದ್ರಾಸ್ ಲೈನ್ ವಿಚಾರ. ಮಾನ್ಯ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಎಲ್ಲಾ ಕಡೆ ಸೇತುವೆಗಳು ಬಂದವು. ಬೆಂಗಳೂರು ಈಸ್ಟ್ ಮತ್ತು ಚೈಕನಹಳ್ಳಿ ಹಾಗೂ ರಿಂಗ್ ರೋಡ್ ಕಡೆಗಳಲ್ಲಿ ಮೂರು ಕಡೆ ಸೇತುವೆಗಳು ಬರಬೇಕು. ಇವೆಲ್ಲಾ ಇನ್ಸ್‌ಪೆಕ್ಷನ್ ಆಗಿವೆ. ದಯವಿಟ್ಟು ಈ ಕೆಲಸಗಳನ್ನೆಲ್ಲಾ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಕೇಂದ್ರ ಸರ್ಕಾರವನ್ನು ಕಾಂಟ್ಯಾಕ್ಟ್ ಮಾಡಿ ಶುರು ಮಾಡಲಿಲ್ಲವೆಂದರೆ ಟ್ರಾಫಿಕ್ ಜಾಸ್ತಿಯಾಗಿ ಜನ ಒದ್ದಾಡುವಂತಹ ಪರಿಸ್ಥಿತಿ ಬರುತ್ತದೆ.

ಶ್ರೀ ಬಿ. ಎನ್. ಬಚ್ಚೇಗೌಡ(ಮಾನ್ಯ ಸಾರಿಗೆ ಸಚಿವರು) : ಮಾನ್ಯ ಸದಸ್ಯರು ಪ್ರಸ್ತಾಪಿಸುತ್ತಿರುವಂತಹ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಯ ರೈಲ್ವೆ ಇಲಾಖೆಗೆ ಸಂಬಂಧಪಟ್ಟಿದ್ದಾಗಿದೆ. ಇದರ ವಿಚಾರದಲ್ಲಿ ಸರ್ಕಾರದವರು ಕೋ-ಆರ್ಡಿನೇಟ್ ಮಾಡಿ ಜನರಲ್ ಮ್ಯಾನೇಜರ್‌ರವರ್ನು ಕರೆಸಿ ಮಾನ್ಯ ಶಿವರಾಜ್ ಹಾಗೂ ಮಾನ್ಯ ರಾಜಣ್ಣನವರು ಪ್ರಸ್ತಾಪಿಸಿರುವಂತಹ ವಿಷಯಗಳ ಬಗ್ಗೆ ಚರ್ಚೆ ಮಾಡಿ, ಎಲ್ಲಿ ವೈಡನಿಂಗ್ ಮಾಡಬೇಕು, ಎಲ್ಲಿ ಬ್ರಿಡ್ಜ್‌ಗಳನ್ನು ಕಟ್ಟಬೇಕು ಎಂಬುದನ್ನು ತ್ವರಿತವಾಗಿ ಮಾಡುವ ದೃಷ್ಟಿಯಿಂದ ಶಾಸಕರುಗಳನ್ನೂ ಸೇರಿಸಿ ಒಂದು ಸಭೆ ಕರೆಯುತ್ತೇನೆ. ಆ ಸಭೆಯಲ್ಲಿ ಚರ್ಚೆ ಮಾಡಿ ಮುಂದೆ ಆಗಬೇಕಾದಂತಹ ಕಾರ್ಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತದೆಂದು ತಿಳಿಸಬಯಸುತ್ತೇನೆ.

(ಕ) ಟಿಪ್ಪು ಸುಲ್ತಾನರ ಮರಿಮಕ್ಕಳ ಕುರಿತು

ಶ್ರೀ ಸೈಯ್ಯದ್ ಜುಲ್ಫಿಕರ್ ಹಶ್ಮಿ(ಬೀದರ್) : ಮಾನ್ಯ ಅಧ್ಯಕ್ಷರೇ, ಈ ದೇಶದ ಮೊಟ್ಟ ಮೊದಲನೇ ಸ್ವತಂತ್ರ ಸೇನಾನಿಯಾದ ಟಿಪ್ಪೂಸುಲ್ತಾನರ ಮರಿಮಕ್ಕಳು ಕರ್ನಾಟಕದಲ್ಲಿ ಬೀದಿ ಪಾಲಾಗುತ್ತಿದ್ದಾರೆ. ಅವರ ಮೇಲೆ ಕೇಸ್‌ಗಳನ್ನು ಹಾಕಲಾಗುತ್ತಿದೆ. ತಮಗೆ ಗೊತ್ತಿರುವಂತೆ ಅವರ ತಂದೆಯವರನ್ನು ಕರೆದುಕೊಡು ಬಂದವರು ಆಗಿನ ಸರ್ಕಾರದ ಒಬ್ಬ ಸಚಿವರು, ಈಗ ಇವರಿಗೆ ಕರೆದುಕೊಂಡು ಬಂದವರು ಈಗಿನ ಸರ್ಕಾರದ ಒಬ್ಬ ಸಚಿವರು. ಅವರನ್ನು ಇಲ್ಲಿಗೆ ಕರೆದುಕೊಂಡು ಬಂದರು. 1971ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ದೇಶದ ಪ್ರಧಾನ ಮಂತ್ರಿಗಳಾಗಿದ್ದಾಗ, ಮಾನ್ಯ ದೇವರಾಜ್‌ಅರಸ್‌ರವರು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಅಜೀಜ್‌ಸೇಟ್‌ರವರು ಶ್ರೀರಂಗಪಟ್ಟಣದಲ್ಲಿ ಅವರನ್ನು ಕರೆಸಿ ಒಂದು ರ್ಯಾಲಿ ಮಾಡಿದರು. ಸಾಕಷ್ಟು ದುಡ್ಡು ಅವರಿಗೆ ರೀ-